# ಜಗದ್ದಳ ಸೋಮನಾಥನ ಕಲ್ಯಾಣಕಾರಕ

**ಡಾ.ಮಹಾದೇವಿ ಆರ್. ಹಿರೇಮಠ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕರ್ನಾಟಕ ಕಲಾ ಮಹಾವಿದ್ಯಾಲಯ,
ಧಾರವಾಡ–580001

ಭಾರತೀಯ ವೈದ್ಯ ಪದ್ಧತಿಗಳಲ್ಲಿ ಹೆಚ್ಚು ಪುರಾತನವಾದದ್ದು ಹಾಗೂ ಪ್ರಸಿದ್ಧಿಯನ್ನು ಪಡೆದದ್ದು ಆಯುರ್ವೇದ. ಇದು ಮನುಷ್ಯನ ಜೀವಿಸುವಿಕೆಗೆ ಮೂಲಭೂತವಾದ ಶಾಸ್ತ್ರ. ಎಲ್ಲ ಪುರುಷಾರ್ಥ ಸಾಧನೆಗೂ ಆರೋಗ್ಯವೇ ಮೂಲ ಪ್ರಧಾನವಾದುದರಿಂದಲೂ ಅದನ್ನು ಆಯುರ್ವೇದ ಅಭ್ಯಾಸದಿಂದಲೇ ಸಾಧಿಸಬೇಕಾಗಿರುವುದರಿಂದಲೂ ಈ ವೇದವು ಐಹಿಕ, ಆಮುಶ್ಮಿಕ ಫಲ ಸಾಧನೆಗೆ ಪರಮಾವಶ್ಯಕವಾಗಿದೆ. ಆಯುರ್ವೇದ ಪದದ ಅರ್ಥವೇ ಬಹಳ ವಿಶಾಲವಾದುದು. 'ಆಯು' ಎಂದರೆ ಜೀವಿತಾವಧಿ, ವೇದ ಎಂದರೆ ಜ್ಞಾನ, ಪರಿಪೂರ್ಣ ಹಾಗೂ ಸುಖಕರ ಜೀವಿತಾವಧಿಗೆ ಬೇಕಾಗುವ ಸಮಗ್ರ ಜ್ಞಾನವನ್ನು ಒದಗಿಸಿಕೊಡುವುದೇ ಆಯುರ್ವೇದ. 'ಹಿತಾಹಿತಂ ಸುಖಂ ದುಃಖಮಾಯಸ್ತಸ್ಯ ಹಿತಾಹಿತಂ ಮಾನಂ ಚಿತ್‌ಚ್ಯಯತ್ ಪ್ರೋಕ್ತಂ ಆಯುರ್ವೇದಃ ಸ ಉಚ್ಯತೇ' ಎಂದರೆ ಹಿತವಾವುದು ಅಹಿತವಾವುದು, ಸುಖವಾವುದು ಮತ್ತು ದುಃಖವಾವುದು, ಆಯುಷ್ಯದ ಹಿತಗಳಾವವು ಎಂಬುದನ್ನು ಯಾವುದರಿಂದ ತಿಳಿಯಲಾಗುತ್ತದೆಯೋ ಅದಕ್ಕೆ ಆಯುವೇದವೆಂದು ಹೆಸರು. ಅಂದ ಮೇಲೆ ಈ ಪದ್ಧತಿ ದೇಹಾರೋಗ್ಯವನ್ನು ಮಾತ್ರವಲ್ಲ ಮನಸ್ಸಿನ ಸ್ವಾಸ್ಥ್ಯ ಹಾಗೂ ಆತ್ಮೋನ್ನತಿಯನ್ನು ಲಕ್ಷಿಸುತ್ತದೆ.

ಅಥರ್ವಣವೇದದ ಉಪಾಂಗವೆಂದು ಪ್ರಣೀತವಾದ ಆಯುರ್ವೇದವು ಈಶ್ವರನಿಂದ ಲೋಕ ಸೃಷ್ಟಿಕರ್ತನಾದ ಬ್ರಹ್ಮನಿಗೆ ಆಮೂಲಾಗ್ರವಾಗಿ ಬೋಧಿಸಲ್ಪಟ್ಟು ನಂತರ ಬ್ರಹ್ಮನಿಂದ ದಕ್ಷಪ್ರಜಾಪತಿಗೆ ಭೋದಿಸಲ್ಪಟ್ಟಿತೆಂದು ಪ್ರತೀತಿಯಿದೆ. ನಂತರ ದಕ್ಷಪ್ರಜಾಪತಿಯು ಆಶ್ವಿನಿ ದೇವತೆಗಳಿಗೆ ಈ ವಿದ್ಯೆಯನ್ನು ಹೇಳಿಕೊಟ್ಟನೆಂದೂ, ನಂತರ ಅವರಿಂದ ಇಂದ್ರನೂ ಕಲಿತನೆಂದೂ, ನಂತರ ಭಾರಧ್ವಾಜ ಋಷಿಯು ಇಂದ್ರನಿಂದ ಇದನ್ನು ಕಲಿತು ಅನೇಕ ಋಷಿಮುನಿಗಳಿಗೆ ಸಾಮಾನ್ಯರಿಗೆ ಕಲಿಸಿದರೆಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ಪುನರ್ವಸು ಅತ್ರೇಯ ಋಷಿಯು ಆಯುರ್ವೇದವನ್ನು ಅಧ್ಯಯನ ಮಾಡಿ ತನ್ನ ಆರು ಜನ ಶಿಷ್ಯರಾದ ಅಗ್ನಿವೇಶ, ಭೇಡ, ಜತುಕರ್ಣ, ಪರಾಶರ, ಹಾರೀತ ಮತ್ತು ಕ್ಷಾರಪಾಣಿಗಳಿಗೆ ಈ ಶಾಸ್ತ್ರವನ್ನು ಹೇಳಿಕೊಟ್ಟನೆಂದೂ ಪ್ರತೀತಿಯಿದೆ. ಇವರೆಲ್ಲರೂ ಪ್ರತ್ಯೇಕ ಗ್ರಂಥಗಳನ್ನು ರಚಿಸಿದಾಗ ಆಯಾ ತಂತ್ರಗಳ ಹೆಸರಿನೊಂದಿಗೆ ಒಂದೊಂದು ಗ್ರಂಥಗಳು ಸಿದ್ಧಾಂತಗಳು ಹುಟ್ಟಿಕೊಂಡು ಪ್ರಸಿದ್ಧವಾದವು. ಅವುಗಳಲ್ಲಿ ಅಗ್ನಿವೇಶ ಬರೆದ ತಂತ್ರ ಇನ್ನೂ ಶ್ರೇಷ್ಠವೆನಿಸಿತು. ಮುಂದೆ ಚರಕನೆಂಬ ಋಷಿಯು ಅಗ್ನಿವೇಶ ತಂತ್ರವನ್ನು ಪರಿಷ್ಕರಿಸಿ ಚರಕ ಸಂಹಿತೆಯನ್ನು ರಚಿಸಿದನು. 8 ಪ್ರಕರಣಗಳು, 30 ಅಧ್ಯಾಯಗಳನ್ನು ಒಳಗೊಂಡ ಈ ಗ್ರಂಥ ಮಾನವ ಶರೀರದ ಅಂತರ್ಯ (ಒಳ) ಭಾಗಕ್ಕೆ ಸಂಬಂಧಪಟ್ಟ ಚಿಕಿತ್ಸೆಯಲ್ಲಿ ಬಹು ಉತ್ತಮವಾದದ್ದೆಂಬ ಭಾವನೆಯಿದೆ. ಹೀಗಾಗಿ ಚರಕ ಸಂಹಿತೆಗೆ ಸುಮಾರು 50 ವ್ಯಾಖ್ಯಾನಗಳು ಸಿದ್ಧವಾಗಿವೆ. ಒಂಬತ್ತನೆಯ ಶತಮಾನದಲ್ಲಿದ್ದ ದೃಢಬಲ ಹನ್ನೊಂದನೆಯ ಶತಮಾನದಲ್ಲಿದ್ದ ಚಕ್ರಪಾಣಿದತ್ತ ಇವರ ವ್ಯಾಖ್ಯಾನಗಳು ಪ್ರಸಿದ್ಧವಾಗಿವೆ. ಈ ಪಂಥದವರು ವಿಶೇಷವಾಗಿ 'ಕಾಯಚಿಕಿತ್ಸೆ'ಗೆ ಪ್ರಾಧಾನ್ಯತೆಯನ್ನು ನೀಡಿದ್ದಾರೆ.

ಇನ್ನೊಂದು ಪಂಥ ಭಗವಾನ್ ಧನ್ವಂತರಿಯದು. ಧನ್ವಂತರಿ ದಿವೋದಾಸನೆಂಬುವನು ಕಾಶಿಯ ರಾಜನಾಗಿದ್ದನೆಂದು ಪ್ರತೀತಿ. ಇವನೂ ಇಂದ್ರನಿಂದ ಆಯುರ್ವೇದವನ್ನು ಕಲಿತು ಸುಶ್ರುತ, ಔಷಧೇನವ, ವೈತರಣ, ಔರಭ್ರ, ಪುಷ್ಕಲಾವತ, ಕರವೀರ್ಯ ಇವರಿಗೆ 'ಶಲ್ಯಚಿಕಿತ್ಸೆ'ಯನ್ನೇ ಮುಖ್ಯವಾಗಿ ಉಪದೇಶಿಸಿದ. ಧನ್ವಂತರಿಯ ಶಿಷ್ಯರಲ್ಲಿ ಪ್ರಮುಖನಾದವನು ಸುಶ್ರುತ. ಇವನು ಬರೆದಿರುವ ಸಂಹಿತೆಯಲ್ಲಿ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ. ಇದಕ್ಕೆ 'ಶಲ್ಯಾಂಗ'ವೆಂದು ಹೇಳಲಾಗುತ್ತದೆ. ಸುಶ್ರುತ ಸಂಹಿತೆಗೆ ಡಲ್ಹಣ ಮತ್ತು ಚಕ್ರಪಾಣಿದತ್ತರು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಹಾಗೆಯೇ ಅಷ್ಟಾಂಗ ಹೃದಯ, ಕಶ್ಯಪ ಸಂಹಿತಾ, ಭೇಲಸಂಹಿತಾ, ಮಾಧವನಿಧಾನ, ಶಾರಂಗಧರ ಸಂಹಿತೆ, ಭಾವಪ್ರಕಾಶ, ಮಧುಕೋಶ, ಆತಂಕದರ್ಪಣ,

ಸಿದ್ಧಯೋಗ, ಚಕ್ರಸಂಗ್ರಹ, ಮೊದಲಾದ ಮೂಲ ಹಾಗೂ ವ್ಯಾಖ್ಯಾನಗ್ರಂಥಗಳು ಆಯುರ್ವೇದದ ವ್ಯಾಪ್ತಿ ಹಾಗೂ ಜನಪ್ರಿಯತೆಯನ್ನು ಸೂಚಿಸುತ್ತವೆ. ಅದು ವೇದಗಳಿಗೆ ಸಮಾನವೆನ್ನುವಲ್ಲಿ ಅದರ ಪ್ರಾಮುಖ್ಯತೆ ಹಾಗೂ ಶ್ರೇಷ್ಠತೆಗಳು ಸುಸ್ಪಷ್ಟವಾಗಿವೆ. ಪೂರ್ವೋಕ್ತ ಗ್ರಂಥಗಳ ಪೈಕಿ ವಾಗ್ಭಟ ವಿರಚಿತ ಅಷ್ಟಾಂಗ ಹೃದಯ ವಿಶಿಷ್ಟವಾದುದು. ಅದು ವೈದ್ಯ ವಿಜ್ಞಾನದ ವಿಭಾಗಗಳನ್ನು ತಿಳಿಸುತ್ತದೆ. ಕಾಯಚಿಕಿತ್ಸಾ (ಮೆಡಿಸಿನ್) ಶಲ್ಯತಂತ್ರ (ಸರ್ಜರಿ) ಶಾಲಾಕ್ಯತಂತ್ರ (ಇಯರ್, ನೋಸ್, ಥ್ರೋಟ್) ಭೂತವಿದ್ಯಾ (ಸೈಕಿಯಾಟ್ರಿ) ಅಗದತಂತ್ರ (ಟಾಕ್ಸಿಕೊಲಾಜಿ, ವಿಷಶಾಸ್ತ್ರ) ರಸಾಯನಶಾಸ್ತ್ರ (ಜೆರಿಯಾಟ್ರಿಕ್ಸ್) ಮತ್ತು ವಾಜೀಕರಣ (ಸೈಯನ್ಸ್ ಆಫ್ ಅಫ್ರೊಡೈಸಿಸ್) ಇವೇ ಆ ಎಂಟು ವಿಭಾಗಗಳು. ಈ ಕಾರಣದಿಂದಾಗಿ ಅತ್ರೇಯ ಹಾಗೂ ಧನ್ವಂತರಿ ಪಂಥಗಳು ಭಾರತೀಯ ವೈದ್ಯವಿಜ್ಞಾನ ಕ್ಷೇತ್ರದಲ್ಲಿ ಸುಪ್ರಸಿದ್ಧವೆನ್ನುವುದು ಸರ್ವವೇದ್ಯ, ಆಯುರ್ವೇದ ಪದ್ಧತಿಯ ಜೊತೆ ಜೊತೆಗೆ ಅದರ ಬೇರೆ ಬೇರೆ ಮುಖಗಳೆಂಬಂತೆ ಪ್ರಕೃತಿ ಚಿಕಿತ್ಸೆ, ರಸಚಿಕಿತ್ಸೆ, ನಾಡಿವಿಜ್ಞಾನ, ಯೋಗ ಪದ್ಧತಿಗಳೂ ಜನಪ್ರಿಯವಾಗಿವೆ.

ಸಂಸ್ಕೃತ ಪಾಕೃತಗಳಲ್ಲಷ್ಟೇ ಅಲ್ಲದೆ ಬೌದ್ಧ ಸಾಹಿತ್ಯದಲ್ಲಿಯೂ ವೈದ್ಯ ಸಂಬಂಧವಾದ ಉಲ್ಲೇಖಗಳು ದೊರೆಯುತ್ತವೆ. ನಾಗಾರ್ಜುನ, ಜೀವಕ ಮೊದಲಾದವರು ವೈದ್ಯಶಾಸ್ತ್ರದಲ್ಲಿ ಸುಪ್ರಸಿದ್ಧರಾಗಿದ್ದರು. ಬೌದ್ಧ ಮತ ಪ್ರಸಾರದೊಂದಿಗೆ ಆಯುರ್ವೇದ ವೈದ್ಯಶಾಸ್ತ್ರ ಕುರಿತ ಜ್ಞಾನವು ಟಿಬೆಟ್, ಮಧ್ಯ ಏಷ್ಯಾ, ಚೀನಾ ಮತ್ತು ಶ್ರೀಲಂಕಾಗಳಲ್ಲಿ ಹರಡಿತು. ಅಲೆಕ್ಸಾಂಡರ್ ಭರತಖಂಡದ ಮೇಲೆ ದಾಳಿನಡೆಸಿದಾಗ ಅಲೆಕ್ಸಾಂಡರ್ನಿಗೆ ಸರ್ಪ ಕಚ್ಚಿ ಸಾವಿನಂಚಿನಲ್ಲಿರುವಾಗ ಸರ್ಪಾದಿ ಸಂಬಂಧವಾದ ವಿಷಗಳಿಗೆ ಅವನ ಸೈನ್ಯದ ವೈದ್ಯರ ಬಳಿ ಮದ್ದುಗಳಿರಲಿಲ್ಲವೆಂದೂ ಅವನು ವೈರಿ ಎಂಬುದನ್ನೂ ಪರಿಗಣಿಸದೆ ಭಾರತೀಯ ಆಯುರ್ವೇದ ವೈದ್ಯರು ವಿಷನಿವಾರಣೆ ಮಾಡಿದರೆಂದೂ, ಇದರಿಂದ ಮನ ಪರಿವರ್ತನೆಯಾದ ಅಲೆಕ್ಸಾಂಡರ್ ಭಾರತದ ಮೇಲೆ ಇನ್ನು ಮೇಲೆ ಯುದ್ಧ ಮಾಡುವುದಿಲ್ಲವೆಂದು ಸಾರಿದ್ದೇ ಅಲ್ಲದೆ, ಅವನು ಸ್ವದೇಶಕ್ಕೆ ಹಿಂದಿರುಗುವಾಗ ಇಲ್ಲಿಯ ಕೆಲವು ವೈದ್ಯರನ್ನು ತನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋದನೆಂದೂ ಪ್ರತೀತಿಯಿದೆ. ಭಾರತದೊಡನೆ ಅರಬ್ಬರ ಸಂಪರ್ಕವುಂಟಾದುದರ ಫಲವಾಗಿ ಅನೇಕ ಭಾರತೀಯ ವೈದ್ಯಗ್ರಂಥಗಳು ಅರಬ್ಬಿ ಭಾಷೆಗೆ ತರ್ಜುಮೆ ಗೊಂಡಿವೆ. ಅದರಂತೆ ಅರಬ್ಬೀ ವೈದ್ಯ ವಿದ್ವಾಂಸನೊಬ್ಬ, 'ಸುಶ್ರುತ ಸಂಹಿತೆ'ಯನ್ನು 'ಸಸ್ರುದ್ ಕಿಲಲ್– ಸಮುರಲ್–ಹಿಂದ್–ಇ' ಎಂಬ ಹೆಸರಿನಲ್ಲಿ ಅರಬ್ಬಿ ಭಾಷೆಗೆ ತರ್ಜುಮೆಗೊಳಿಸಿದ. ಅಲಿಕಾಬನ್ ಜೈನ್ ಎಂಬ ವಿದ್ವಾಂಸ ಚರಕ ಸಂಹಿತೆಯನ್ನು 'ಸರಗ್' ಎಂಬ ಹೆಸರಿನಲ್ಲಿ ಭಾಷಾಂತರಿಸಿದನು. ಅಂತೆಯೆ ಮಾಧವ ನಿಧಾನ 'ಬದನ್' ಎಂದೂ ಅಷ್ಟಾಂಗ ಹೃದಯ 'ಆಷ್ಟಾಂಕರ್' ಎಂದೂ ಅನಂತರ ಆರೇಬಿಕರಣವಾದವು. ಇರಾನ್‌ನ ದೊರೆ 1ನೇ ಖೂಸ್ರೋವಿನ (ಕ್ರಿ.ಶ. 531–579) ಆಶ್ರಯದಲ್ಲಿದ್ದ 'ಬುರ್‌ಜೂಯ' ಎಂಬ ವಿದ್ವಾಂಸ ಆಯುರ್ವೇದವನ್ನು ಆಮೂಲಾಗ್ರವಾಗಿ ವ್ಯಾಸಂಗ ಮಾಡಿದ್ದನಂತೆ. ಹೀಗೆ ಭಾರತೀಯ ಆಯುರ್ವೇದ ತನ್ನ ಮಹತ್ವದಿಂದಾಗಿ ಅನ್ಯದೇಶಿಯರನ್ನು ಆಕರ್ಷಿಸಿತ್ತು.

ಕರ್ನಾಟಕದಲ್ಲಿಯೂ ಸಹ ಅನೇಕ ವೈದ್ಯರು ವೈದ್ಯವೃತ್ತಿಯಲ್ಲಿ ಪ್ರವೀಣರಾಗಿದ್ದು, ತಮ್ಮ ಅನುಭವಗಳನ್ನು ಸಾಹಿತ್ಯ ರೂಪದಲ್ಲಿ ದಾಖಲಿಸಿದ್ದಾರೆ. ಇವರಲ್ಲಿ ಎಂಟನೆಯ ಶತಮಾನದ ಉಗ್ರಾದಿತ್ಯ, ಹನ್ನೆರಡನೆಯ ಶತಮಾನದ ಬೋಪದೇವ, ಹೇಮಾದ್ರಿ ಮುಂತಾದವರು. ಆದರೆ ಇವರೆಲ್ಲ ಸಂಸ್ಕೃತದ ವೈದ್ಯಕವಿಗಳು, ಉಗ್ರಾದಿತ್ಯನ 'ಕಲ್ಯಾಣಕಾರಕ'ವೇ ಕರ್ನಾಟಕದಲ್ಲಿ ಸಿದ್ಧವಾದ ಮೊಟ್ಟಮೊದಲ ಸ್ವತಂತ್ರ ವೈದ್ಯಕೃತಿ. ಇದನ್ನು ಅನುಸರಿಸಿಯೇ ಜಗದ್ದಳ ಸೋಮನಾಥ ಕವಿ, (ಕ್ರಿ.ಶ 1175) ಕನ್ನಡದಲ್ಲಿ 'ಕರ್ನಾಟಕ ಕಲ್ಯಾಣಕಾರಕ'ವೆಂಬ ಹೆಸರಿನಿಂದ ಸ್ವತಂತ್ರ ಸಂಪೂರ್ಣ ಕೃತಿಯನ್ನು ಬರೆದಿದ್ದಾನೆ.

ಕನ್ನಡ ಸಾಹಿತ್ಯದ ಕೆಲವು ಕೃತಿಗಳಲ್ಲಿ ವೈದ್ಯಶಾಸ್ತ್ರವು ಪ್ರಾಸಂಗಿಕವಾಗಿ ಅಲ್ಲಲ್ಲಿ ಚರ್ಚಿಸಲ್ಪಟ್ಟರೆ ಕೆಲವು ಕೃತಿಗಳು ವೈದ್ಯಶಾಸ್ತ್ರವನ್ನು ದಾಖಲಿಸಲೆಂದೇ ರಚಿಸಲ್ಪಟ್ಟವುಗಳು. ಕೆಲವು ಕೃತಿಗಳಲ್ಲಂತೂ ವಿಷಯ ವಿವರಣೆಗಾಗಿ ವೈದ್ಯಕವಿಗಳು ಮಾಡಿಕೊಂಡ ವರ್ಗೀಕರಣ ಅದ್ಭುತವಾದದ್ದು. ಸಾವಿರ ವರ್ಷಗಳಷ್ಟು ಹಿಂದೆಯೇ ಕನ್ನಡದ ವೈದ್ಯಶಾಸ್ತ್ರದ ಕವಿಗಳು ವೈದ್ಯದಲ್ಲೂ ಸಾಮಾನ್ಯವೈದ್ಯ, ಪುರುಷವೈದ್ಯ, ಸ್ತ್ರೀವೈದ್ಯ, ಬಾಲವೈದ್ಯ, ಗೋವೈದ್ಯ ಅಶ್ವವೈದ್ಯ, ಗಜವೈದ್ಯ, ವಿಷವೈದ್ಯ ಎಂಬುದಾಗಿ ಉಪಶಾಖೆಗಳನ್ನಾಗಿ ಮಾಡಿಕೊಂಡಿದ್ದಾರೆ. ಈ ಎಲ್ಲಾ ಪ್ರಕಾರದ ಉಪಶಾಖೆಗಳನ್ನು ಅಥವಾ ವೈದ್ಯ ವಿಷಯಗಳನ್ನು ಸಮೀಕರಿಸಿ ವಿಶ್ವಕೋಶದೊಪಾದಿಯಲ್ಲಿ ಒಂದೇಡೆ ಚರ್ಚಿಸಿಸಲ್ಪಟ್ಟ ಕೃತಿ ಎಂದರೆ ಜಗದ್ದಳ ಸೋಮನಾಥನ 'ಕಲ್ಯಾಣ ಕಾರಕ'.

ಜಗದ್ದಳ ಸೋಮನಾಥ ಜೈನ ಕವಿ. ಈತನ 'ಕಲ್ಯಾಣ ಕಾರಕ' ಕೃತಿಯ ಆಧಾರದ ಮೇಲೆ ಇವನ ಕಾಲವನ್ನು ಕ್ರಿ.ಶ.1175 ಎಂಬುದಾಗಿ ಕವಿ ಚರಿತ್ರೆಕಾರರು ತರ್ಕಿಸಿದ್ದಾರೆ. "ಈತನಿಗೆ 'ವಿಚಿತ್ರ' ಕವಿ ಎಂಬ ಬಿರುದು ಇದ್ದಂತೆ ತಿಳಿದು ಬರುತ್ತದೆ. ತನ್ನ ಗ್ರಂಥವನ್ನು ಸುಮನೋಬಾಣ ಕವಿಯು ಅಭಯ ಚಂದ್ರ ಸಿದ್ದಂತಿಯು ತಿದ್ದಿದರೆಂದು ಹೇಳುವುದರಿಂದ ಈತ ಸುಮನೋಬಾಣನ ಕಾಲದವನೆಂದು ತಿಳಿದು ಬರುತ್ತದೆ. ಕನ್ನಡದಲ್ಲಿ ಕೀರ್ತಿವರ್ಮನ (ಸು.1100) ಗೋವೈದ್ಯವನ್ನು ಬಿಟ್ಟರೆ ಇದುವೇ ವೈದ್ಯರಂತಗಳಲ್ಲಿ ಪುರಾತನವಾದದ್ದು"[1] ಎಂಬುದಾಗಿ ವಿದ್ವಾಂಸರ ಅಭಿಪ್ರಾಯ. ಜಗದ್ದಳ ಸೋಮನಾಥನು 'ಕರ್ನಾಟಕ ಕಲ್ಯಾಣ ಕಾರಕ' ಕೃತಿಯನ್ನು ಆಚಾರ್ಯ ಪೂಜ್ಯಪಾದ (7ನೇ ಶತಮಾನ) ವಿರಚಿತ ಸಂಸ್ಕೃತ ಕಲ್ಯಾಣ ಕಾರಕವನ್ನು ಅನುಸರಿಸಿ ರಚಿಸಿದ್ದು ಎಂದು ಗ್ರಂಥದ ಆರಂಭದಲ್ಲಿಯೇ ಕವಿ ಹೇಳಿಕೊಂಡಿದ್ದಾನೆ. ಕಲ್ಯಾಣ ಕಾರಕವು ಶಾಲಾಕ್ಯ ತಂತ್ರವನ್ನು ವಿವರಿಸುತ್ತದೆ. 'ಶಾಲಾಕ್ಯ ತಂತ್ರ'ವೆಂದರೆ ಆಧುನಿಕ ವೈದ್ಯ ವಿಜ್ಞಾನದ ವ್ಯವಸ್ಥೆಯಲ್ಲಿ ಬರುವ ಈ.ಎನ್.ಟಿ. ಅಂದರೆ ಕಣ್ಣು, ಕಿವಿ, ಮೂಗು, ಗಂಟಲು ಹಾಗೂ ಬಾಯಿಗಳ ಚಿಕಿತ್ಸೆಯನ್ನು ಕುರಿತಾದುದು ಎಂದರ್ಥ. ಈಗ ಈ ವಿಧಾನವು ಆಧುನಿಕ ಯುಗದ ಆಯುರ್ವೇದ ವೈದ್ಯಪದ್ಧತಿಯಲ್ಲಿಯೂ ವಿಶ್ಲೇಷಣೆಗೆ ಒಳಗಾಗಿದೆ.

ಪೂಜ್ಯಪಾದರ ಇದೇ ಗ್ರಂಥವನ್ನು ಆಧಾರವಾಗಿ ಇಟ್ಟುಕೊಂಡು ಉಗ್ರಾಧಿತ್ಯಾಚಾರ್ಯರು ಸಂಸ್ಕೃತದಲ್ಲಿ ಕಲ್ಯಾಣ ಕಾರಕ ಎಂಬ ಹೆಸರಿನಲ್ಲಿಯೇ ಗ್ರಂಥ ರಚನೆಯನ್ನು ಮಾಡಿದರು. "ಉಗ್ರಾದಿತ್ಯ ಆಚಾರ್ಯರು (ಕ್ರಿ.ಶ 815–877) ರಾಷ್ಟ್ರಕೂಟರ ಅರಸ ನೃಪತುಂಗನ ಆಸ್ಥಾನ ವೈದ್ಯರಾಗಿ ಪ್ರಸಿದ್ಧಿಯನ್ನು ಪಡೆದವರಾಗಿದ್ದರು."[2] ಇವರು ರಚಿಸಿದ ಕಲ್ಯಾಣ ಕಾರಕವು ಮೂಲ ಸಂಸ್ಕೃತ ಭಾಷೆಯಲ್ಲಿದ್ದು ಆಯುರ್ವೇದದ ಅಷ್ಟಾಂಗಗಳ ವಿವರವನ್ನು ವಿವರವಾಗಿ ತಿಳಿಸುತ್ತದೆ. ಜೈನ ಸಂಪ್ರದಾಯವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಈ ಕೃತಿಯಲ್ಲಿ ಮದ್ಯ ಮಾಂಸ ಮತ್ತು ಜೇನು ತುಪ್ಪವನ್ನು ಆಹಾರವಾಗಿ ಇಲ್ಲವೇ ಔಷಧ ರೂಪವಾಗಿ ಎಲ್ಲೂ ಬಳಸಿದ್ದು ಕಂಡುಬರುವುದಿಲ್ಲ. ಜಗದ್ದಳ ಸೋಮನಾಥನ ಕಲ್ಯಾಣ ಕಾರಕ ಕೃತಿಯನ್ನು ಸಂಪಾದಿಸಿದ ಡಾ.ಕೆ.ಆರ್ ಶ್ರೀಕಂಠಮೂರ್ತಿ ಅವರಿಗೆ ಇರಲಿಲ್ಲವಾದ್ದರಿಂದ ಅದರಲ್ಲಿ ಅನೇಕ ಪದ್ಯಗಳು ಹಾಗೂ ಅಪೂರ್ಣ ಸ್ಥಿತಿಯಲ್ಲಿ ದೊರೆತಿದ್ದರಿಂದ ಸಾಧ್ಯವಾದಷ್ಟು ಉಪಲಬ್ದವಿದ್ದ ಕೃತಿಗಳನ್ನು ಪರಿಷ್ಕರಿಸಿ ಕಟ್ಟಿಕೊಟ್ಟಿದ್ದರು ಅನೇಕ ಕಡೆಗಳಲ್ಲಿ ಏನನ್ನು ಹೇಳಲು ಸಾಧ್ಯವಾಗಿಲ್ಲ ಅಲ್ಲದೆ ಈಗಿರುವ ಕನ್ನಡದ ಈ ಅಪರೂಪದ ವೈದ್ಯ ಗ್ರಂಥವು ಇಂದು ಉಪಲಬ್ಧವಿಲ್ಲದಿರುವುದು ಅತ್ಯಂತ ವಿಷಾದಕರ ಸಂಗತಿ. ಪ್ರಸ್ತುತವಾಗಿ ಅಲ್ಲಲ್ಲಿ ದೊರೆತ ಮಾಹಿತಿಗಳನ್ನು ಕ್ರೂಢೀಕರಿಸಿ ಗ್ರಂಥದ ಕೆಲವು ಅಂಶಗಳನ್ನು ಮೂರ್ತ ರೂಪದಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ.

ಸೋಮನಾಥ ಕವಿಯು ತನ್ನ ಗ್ರಂಥಾರಂಭದಲ್ಲಿ ಚಂದ್ರನಾಥನನ್ನು ಸ್ತುತಿಸಿ. ಸಿದ್ದರು, ಸರಸ್ವತಿ, ಮಾಧವೇಂದು, ಅಭಯ ಚಂದ್ರ, ಕನಕಚಂದ್ರ ಸಿದ್ಧಾಂತ ಚಕ್ರವರ್ತಿ, ಪಂಡಿತ ದೇವ ಮೊದಲಾದ ತನ್ನ ಸಮಕಾಲೀನ ಮತ್ತು ತನಗಿಂತ ಪೂರ್ವದ ಕವಿಗಳನ್ನು ಸ್ಮರಿಸಿದ್ದಾನೆ. ಗ್ರಂಥವು ಕಂದ ಮತ್ತು ವೃತ್ತಗಳಲ್ಲಿ ರಚಿಸಲ್ಪಟ್ಟಿದೆ.

"ಸುಕರಂ ತಾನೆನೆ ಪೂಜ್ಯಪಾದ ಮುನಿಗಳುಂ ಮುಮ್ಪೇಳ್ದ ಕಲ್ಯಾಣ ಕಾರಕಮಂ
ಬಾಹಟ ಸಿದ್ಧಸಾರ ಚರಕಾದ್ಯುತ್ಕೃಷ್ಟಮಂ ಸದ್ಗುಣಾ
ಧಿಕಮಂ ವರ್ಜಿತ ಮದ್ಯ ಮಾಂಸ ಮಧುವಂ ಕರ್ಣಾಟಕದಿಂ ಲೋಕರ
ಕ್ಷಕಮಂ ಚಿತ್ರಮದಾಗೆ ಚಿತ್ರಕವಿ ಸೋಮಂ ಪೇಳ್ದೆನಿಂತಯಿಂ"[3]

ಸಂಸ್ಕೃತದಲ್ಲಿ ಆಚಾರ್ಯ ಪೂಜ್ಯಪಾದ ಮುನಿಗಳು ಬರೆದಿರುವ ಕಲ್ಯಾಣ ಕಾರಕವನ್ನು ಆಧರಿಸಿ ತನ್ನ ಗ್ರಂಥವನ್ನು ಬರೆದಂತೆ ಕವಿ ಹೇಳಿಕೊಂಡಿದ್ದಾನೆ. ಬಾಹಟ, ಚರಕ, ವಾಗ್ಭಟ, ಸಿದ್ಧಸಾರ ಮುಂತಾದವರ ಗ್ರಂಥಗಳಿಂದಲೂ ವಿಷಯಗಳನ್ನು ಆರಿಸಿಕೊಂಡು ಜೈನ ಧರ್ಮದ ತತ್ವಗಳಂತೆ ಮಧು, ಮದ್ಯ, ಮಾಂಸ, ವರ್ಜಿತವಾಗಿರುವ ಕೃತಿಯನ್ನು ಲೋಕ ರಕ್ಷಣೆಗಾಗಿ ಚಿತ್ರಕವಿ ಸೋಮನಾಥನು ತನ್ನ 'ಕಲ್ಯಾಣಕಾರಕ'ವನ್ನು ಬರೆದಿರುವುದಾಗಿ ತಿಳಿಸಿದ್ದಾನೆ.

"ಆವಾವ ಕಲಾವಿದ್ಯೆಗೆ ಗಳೇ
ವುವೊಲೋಕೋಪಕಾರಿ ವೈದ್ಯಮೆ ಸಾಲ್ಗುಂ
ಭಾವಿಸೆ ಷಡ್ದ್ರವ್ಯಗದೊಳಂ
ಜೀವದ್ರವ್ಯಮೆ ಜಗಕ್ಕೆ ದೈವವೆಂಬರ್"[4]

ಜಗತ್ತಿನಲ್ಲಿರುವ ಷಡ್ದವ್ಯಗಳಲ್ಲಿ ಜೀವದ್ರವ್ಯವೇ ಶ್ರೇಷ್ಠವೆನಿಸುವಂತೆ ಲೋಕದಲ್ಲಿ ಎಷ್ಟೊಂದು ಕಲೆ, ವಿದ್ಯೆಗಳಿದ್ದರೂ ಎಲ್ಲ ವಿದ್ಯೆಗಳಲ್ಲಿ ವೈದ್ಯವಿದ್ಯೆಯೇ ಲೋಕೋಪಕಾರಿಯಾದುದು ಎಂದು ಹೇಳಿದ್ದಾನೆ.

"ಕ್ರೂರಾಳಾಪಂಗೆ ದುರಾ
ಚಾರಿಗೆಮಾತ್ಸರ್ಯಸಂಯುತಂಗಮಹಂ
ಕಾರಿಗೆ ಮಿಥ್ಯಾದೃಷ್ಟಿಗೆ
ಪಾರಕೆಯ್ತವಂಗೆಮಾಡಲಾಗದು ಮದರ್ಂ"[5]

ಅಂದರೆ ಕ್ರೌರ್ಯವನ್ನು ಮೆರೆಯುವವನಿಗೆ, ದುರಾಚಾರಿಗೆ, ಇನ್ನೊಬ್ಬರ ಬಗೆಗೆ ಮಾತ್ಸರ್ಯ ಪಡುವವನಿಗೆ ಮಿಥ್ಯಾದೃಷ್ಟಿಯುಳ್ಳವನಿಗೆ, ವ್ಯಭಿಚಾರಿಗೆ ಅಂದರೆ ಚರಿತ್ರ ಹೀನನಿಗೆ ವೈದ್ಯವನ್ನು ಕಲಿಸಿಕೊಡಬಾರದೆಂದು ಹೇಳುತ್ತಾನೆ. ಹೃದಯವಂತನೂ, ನಿರಹಂಕಾರಿಯೂ ಮತ್ಸರ ಪಡದಿರುವವನಿಗೂ, ಕರುಣೆಯುಳ್ಳಾತನಿಗೂ ಸ್ಥಿರ ಬುದ್ಧಿಯುಳ್ಳಾತನೂ, ಶುದ್ಧನೂ, ಆಸೆ ಆಮಿಷಗಳಿಲ್ಲದವನೂ ಮಾತ್ರ ವೈದ್ಯನಾಗಲು ಯೋಗ್ಯನಾಗಿರುತ್ತಾನೆ. ಈರೀತಿಯಾಗಿ ಮುಂಬರುವ ಜನಾಂಗದ ಪ್ರತಿಯೊಬ್ಬ ವೈದ್ಯನಿಗೂ ಆದರ್ಶವಾಗಿರುವ ರೀತಿಯಲ್ಲಿ ವೈದ್ಯನಿಗೆ ಇರಬೇಕಾದ ಗುಣಗಳನ್ನು ಕುರಿತು ವಿವರಿಸಿದ್ದಾನೆ. ಮುಂದುವರೆದು ರೋಗದ ಲಕ್ಷಣಗಳನ್ನು ಕುರಿತು ಹೇಳುವಾಗ ರೋಗ ಬಂದ ದಿನ, ವಾರ, ತಿಥಿ, ದೂತನ ಲಕ್ಷಣ ಔಷಧಿ ದ್ರವ್ಯಗಳನ್ನು ಸಂಗ್ರಹಿಸಬೇಕಾದ ರೀತಿ, ರೋಗಿಯ ಅತೀತ, ಪಕೃತಿ, ಜ್ಯೋತಿಷ್ಯ, ತಕುನ ಇವೆಲ್ಲವುಗಳೂ ರೋಗ ಲಕ್ಷಣಗಳಲ್ಲ. ಜ್ವರ, ದಮ್ಮು, ಕೆಮ್ಮು, ಅತಿಸಾರ, ತಲೆಶೂಲೆ, ಹೊಟ್ಟೆನೋವು, ಮೈನಡುಕ, ಮೂರ್ಛೆ ಹೋಗುವುದು ಇವು ಶಾರೀರಿಕ ರೋಗದ ಲಕ್ಷಣಗಳು. ಮಾನಸಿಕ ವೇದನೆ, ಅಂತರಿಕ ತುಮುಲಗಳು, ಮನಸ್ಸಿನ ಚಡಪಡಿಕೆ, ಮಾನಸಿಕ ಆಘಾತ, ಒತ್ತಡಗಳು ಮನೋರೋಗಗಳು, ಇವು ಪೂರ್ವಜನ್ಮದ ಪಾಪಕರ್ಮಗಳ ಫಲವಾಗಿ ಬರುತ್ತವೆ ಎಂಬುದು ಸುಳ್ಳು. ತಾತ್ವಿಕವಾಗಿ ಒಳ್ಳೆಯ ಜ್ಞಾನ, ಉತ್ತಮ ನಡತೆ, ದಯೆ, ದಾನ, ಶಾಂತಿ, ಧರ್ಮಪಾಲನೆ ಪರೋಪಕಾರಗಳು ಇಂತಹ ಪಾಪಕರ್ಮಗಳಿಗೆ ಚಿಕಿತ್ಸೆಯಾಗಿವೆ ಎಂದಿದ್ದಾನೆ ಸೋಮನಾಥ.

"ಮಲಸಂಗ್ರಹದಿಂದುದರಾ
ನಲ ದಿಂದಾಮಚಲನೆಯಿಂ ಜ್ವರಮೊಗೆಗುಂ
ಕೆಲರಾತ್ರಿಪುರಲ್ಲಿಧ್ವಂಸಿಯ
ಲಲಾಟದಿಂದದೊಗೆದುದೆಂಬರ ಜ್ವರಮಂ"[6]

ಮಲಬದ್ಧತೆ, ಹೊಟ್ಟೆಯುಬ್ಬರ, ಜಡತ್ವ ಗುಣಗಳಿಂದ ಜ್ವರ ಉಂಟಾಗುತ್ತದೆ. ಕೆಲವರ ಅಭಿಮತದಂತೆ ತ್ರಿಪುರದಹನ ಮಾಡಿದ ಶಿವನು ಸಿಟ್ಟಿನಿಂದ ಜ್ವರವು ಕಾಣಿಸಿಕೊಳ್ಳುವಂತೆ ಮಾಡಿದನು ಎಂದು ಹೇಳುತ್ತಾನೆ ಜಗದ್ದಳ ಸೋಮನಾಥ.

ಜ್ವರ ರೋಗದ ಬಗೆಗೆ ಹೇಳುತ್ತ ಭೂತಜ್ಞರ, ಕಾಮಜ್ವರಗಳನ್ನು ವಿವರಿಸಿದ್ದಾನೆ. ಜ್ವರದಲ್ಲಿ ಅತಿಯಾದ ರೋಮಾಂಚನ, ಮೈನೋವು, ಬಾಯಿಯಲ್ಲಿ ನೀರೂರುವದು ಈ ಲಕ್ಷಣಗಳಿದ್ದರೆ ಅದು ಅಭಿಚಾರ (ಕೃತ್ರಿಮ) ಜ್ವರವೆಂದು ತಿಳಿಯಬೇಕೆಂದಿದ್ದಾನೆ.

"ಜ್ವರದಾದಿಯೊಳುಪವಾಸಂ
ಜ್ವರಮಾಧ್ಯಮದಲ್ಲಿ ಗಂಜಿ ಪೇಲ್ದ ಕಷಾಯಂ
ಜ್ವರಪಾಕದೊಳಸ್ತಮಿತ
ಜ್ವರದೊಳ್ ಮಲಹರಣಮಿನಿತಿವಾರೋಗ್ಯಕರಂ"[7]

ಜ್ವರ ನಿವಾರಣೆಗೆ ಆರಂಭದಲ್ಲಿ ಉಪವಾಸ, ಜ್ವರದ ಮಧ್ಯಕಾಲದಲ್ಲಿ ಗಂಜಿ ಸೇವಿಸುವುದು, ಜ್ವರಹರ ಕಷಾಯಗಳನ್ನು ಸೇವಿಸಬೇಕು. ಜ್ವರದ ಕೊನೆಯ ಸ್ಥಿತಿ ಹಾಗೂ ಜ್ವರ ಬಿಟ್ಟ ನಂತರ ಶೋಧನ ಕರ್ಮಗಳನ್ನು ಮಾಡಿದರೆ ಜ್ವರವು ಮತ್ತೆ ಬರುವುದಿಲ್ಲ ಎಂದಿದ್ದಾನೆ. ಸಕ್ಕರೆ, ಬೇವಿನಕಡ್ಡಿ, ಭದ್ರಮುದ್ರೆ. ದಾಕ್ಷಿಗಳನ್ನು ಸೇರಿಸಿ ಅರೆದು ಕುಡಿಯುವುದರಿಂದ ಪಿತ್ತಜ್ವರವು ಶಮನವಾಗುವುದು. ಚಿಕ್ಕಣಿಕೆಯ ಹುಲ್ಲು, ಬೆಳ್ಳುಳ್ಳಿಯ ರಸಗಳನ್ನು ಸೇರಿಸಿ ಸೇವನೆ ಮಾಡುವುದರಿಂದ ಎಂತಹ ಜ್ವರವಿದ್ದರೂ ಉಪಶಮನವಾಗುವುದು.

ಮೊಸರಿನಲ್ಲಿ ತುಪ್ಪ, ಸಕ್ಕರೆ, ನೆಲ್ಲಿ, ಅಮೃತಬಳ್ಳಿಯ ಪುಡಿಗಳನ್ನು ಸೇರಿಸಿ ಸೇವಿಸುವದರಿಂದ ರಕ್ತಪಿತ್ತವು ಉಪಶಮನವಾಗುವುದು. ಚಕ್ರಾಣಿಯ ಬೇರು, ಆಲದ ಬೆಳ್ಳಲಿನ ಚಿಗುರು, ಪಾಲಿಸೊಪ್ಪುಗಳನ್ನು ಅರೆದು ಅದಕ್ಕೆ ಸೈಂಧವಲವಣವನ್ನು ಸೇರಿಸಿ ತಿನ್ನುವುದರಿಂದ ಅತಿಸಾರವು ಕಡಿಮೆಯಾಗುವುದು, ಶುಂಠಿ, ಮೆಣಸು, ಹಿಪ್ಪಲಿ ಅಥವಾ ಮಾವಿನ ಗೊರಟೆಯ ಬೀಜದ ತಿರುಳು, ಆಜವಾನಗಳನ್ನು ತಿನ್ನುವುದರಿಂದ ಅತಿಸಾರ ಉಪಶಮವಾಗುವುದು. ಹೂಲಿಯ ಬೇರಿನ ತೊಗಟೆ ಹಾಗೂ ಎಮ್ಮೆಯ ಮೊಸರಿನಲ್ಲಿ ಸೈಂಧವವನ್ನು ಬೆರೆಸಿ ತಿನ್ನುವುದರಿಂದ ಅತಿಸಾರವು ಶಮನವಾಗುವುದು ಎಂದಿದ್ದಾನೆ.

ದಾಳಿಂಬೆಯ ಹೂವು, ಮಾವಿನ ಬೀಜ, ಎಳೆಯ ಗರಿಕೆಗಳನ್ನು ಅಕ್ಕಿಯನ್ನು ತೊಳೆದ ನೀರಿನಲ್ಲಿ ಅರೆದು, ಸಕ್ಕರೆಯನ್ನು ಸೇರಿಸಿ ಮೂಗಿನಲ್ಲಿ ಹನಿಹನಿಯಾಗಿ ಹಾಕುವುದರಿಂದ ಮೂಗಿನಿಂದ ರಕ್ತಸ್ರಾವವಾಗುವುದು ನಿಲ್ಲುತ್ತದೆ. ಹಿಪ್ಪಲಿ, ಉತ್ತರಣೆಯ ಬೀಜಗಳನ್ನು ಅಕ್ಕಿತೊಳೆದ ನೀರಿನಲ್ಲಿ ಸೇರಿಸಿ ಕುಡಿಯುವುದರಿಂದ ಸ್ತ್ರೀಯರಲ್ಲಿ ಅತಿಯಾದ ಮುಟ್ಟಿನ ಸ್ರಾವ ನೀಲ್ಲುವುದು ಎಂದಿದ್ದಾನೆ. ಮುಂದುವರೆದು ಸೋಮನಾಥ ಕವಿಯು ಕ್ರಿ.ಶ.1109 ರಲ್ಲಿಯೇ ಮಧುಮೇಹದ ಉಲ್ಲೇಖವನ್ನೂ ಮಾಡುತ್ತಾನೆ. ನೈದಿಲೆಗಡ್ಡೆ, ಅಮೃತಬಳ್ಳಿ, ಕಹಿಪಡವಲ, ತ್ರಿಫಲೆ ಹಾಗೂ ಬೇವಿನ ಕಷಾಯವನ್ನು ನಿತ್ಯವೂ ಸೇವಿಸುವುದರಿಂದ ಮಧುಮೇಹವು ಪರಿಹಾರವಾಗುವುದು. ಹೊಂಗೆಯ ಬೀಜ, ಕಹಿಪಡವಲ, ತ್ರಿಫಲ, ಬೇವಿನ ಎಲೆ ಹಾಗೂ ಅಮೃತಬಳ್ಳಿಗಳನ್ನು ಅರೆದು ತುಪ್ಪದಲ್ಲಿ ಸೇರಿಸಿ ಪಾನ. ಲೇಪನಗಳನ್ನು ಮಾಡುವುದರಿಂದ ಕುಷ್ಠರೋಗವು ಪರಿಹಾರವಾಗುವುದು. ಈ ಪಾಕದಲ್ಲಿ ನಿತ್ಯ ಬೆಳಿಗ್ಗೆ ಬೆಲ್ಲವನ್ನು ಸೇರಿಸಿ ಕುಡಿಯುವದರಿಂದ ಕುಷ್ಠರೋಗಕ್ಕೆ ಸಂಬಂಧಿಸಿದ ಎಲ್ಲ ಚರ್ಮವಿಕಾರಗಳು ನಿವಾರಣೆಯಾಗುವವು ಎ0ದಿದ್ದಾನೆ.

ಗುದದಲ್ಲಿ ಹುಣ್ಣುಗಳು ಉಂಟಾಗಿ ರಕ್ತ ಕೀವುಗಳು ಬರುವವು. ಇದಕ್ಕೆ ಔಷಧದೊಡನೆ ಕಾರಕರ್ಮ, ಶಸ್ತ್ರಚಿಕಿತ್ಸೆಗಳು ಬೇಕಾಗುತ್ತವೆ. ಆಲದ ಮರದ ಚಿಗುರು, ಅಮೃತಬಳ್ಳಿ, ಶುಂಠಿ, ಜೇಷ್ಠಮಧುಗಳನ್ನು ಅರೆದುಕೊಂಡು ಮಜ್ಜಿಗೆಯೊಂದಿಗೆ ಸೇರಿಸಿ ನಿತ್ಯವೂ ಸೇವಿಸುತ್ತ ಹೋದರೆ ಈ ರೋಗವು ಉಪಶಮನವಾಗುವುದು. ಈ ಮುಂದು ಉದರಬೇನೆಗೆ ಪರಿಹಾರೋಪಾಯಗಳನ್ನು ತಿಳಿಸುತ್ತ.

"ಪಶು ಕುರಿಯೆಮ್ಮೆಯೊಂಟೆಯಜಮೆಂಬಿವರೆಯ್ದೆ ಜಮೂತ್ರದಿಂದ ದೇ
ಯಿಸುಗೆ ಹರೀತಕೀಫಲ ಸಹಸ್ರಮನಾರಿಸಿ ಚೂರ್ಣವಾಗಿ ಮಾ
ಡಿಸುವುದು ಸೈಂಧವಂ ತ್ರಿಕಟುಕಂ ಸುಹಿದುಗ್ಧಮಿವೊಂದುಗೂಡಿ ಮ
ರ್ದಿಸುವುದು ಪಂಚಮೂತ್ರದ ಹರೀತಕಿ ಸರ್ವರುಜಾಪಹಾರಕಂ"[8]

ಹಸು, ಕುರಿ, ಎಮ್ಮೆ, ಒಂಟೆ, ಆಡುಗಳ ಮೂತ್ರಕ್ಕೆ ಅಳಲೆಕಾಯಿಯನ್ನು ಸೇರಿಸಿ, ಸಹಸ್ರನಾಮ ಹಾಕಿ ಬೇಯಿಸಿ ಚೂರ್ಣ ತಯಾರಿಸುವುದು. ನಂತರ ಸೈಂಧವ, ಶುಂಠಿ, ಮೆಣಸು, ಹಿಪ್ಪಲಿ ಹಾಗೂ ಕಳ್ಳಿಹಾಲನ್ನು ಸೇರಿಸಿ ಕುಡಿಯುವುದರಿಂದ ಸರ್ವರೋಗಗಳೂ ನಿವಾರಣೆಯಾಗುವವು ಎಂದಿದ್ದಾನೆ .

"ಸಿರಿಕಂಡಂ ಬಾಳಂ ಶ
ರ್ಕರೆ ಬೇವಿನ ಕಡ್ಡಿ ಭದ್ರಮುಸ್ತೆ ದ್ರಾಕ್ಷಂ
ಬೆರಸೆರಡು ಕುಡಿಯಲೆಜಿದೊಡೆ
ಪರಿಹರಿಸುವುಮೆಯೇ ಪಿತ್ತಜನಿತ ಜ್ವರಮಂ"[9]
"ಪರಮತಿಸಾರಂ ಪಿರಿದಾ
ಗಿರೆ ಹೂಲಿಯಬೇರ ತಿಗುಡನೆರ್ಮ್ಮೆಯ ಮೊಸರೊಳ್
ಬೆರಸಿಟ್ಟು ಸೈಂಧವಂ ಕೂ
ಡಿರೆ ಮೆಲ್ವದು ದಿವ್ಯಯೋಗಮಿದು ಪರಿಹರಿಕುಂ"[10]

ಶ್ರೀಗಂಧ, ಲಾಮಂಚ, ಸಕ್ಕರೆ, ಬೇವಿನಕಡ್ಡಿ, ಭದ್ರಮುಸ್ತೆ, ದ್ರಾಕ್ಷಿಗಳನ್ನು ಸೇರಿಸಿ ಅರೆದು ಕುಡಿಯುವುದರಿಂದ ಪತ್ರಜ್ವರವು ಶಮನವಾಗುವುದು. ಅಂತೆಯೇ ಹೂಲಿಯ ಬೇರಿನೊಂದಿಗೆ ತಿಗುಡಿನ ಗೆಡ್ಡೆಯನ್ನು ಅರೆದು ಎಮ್ಮೆಯ ಮೊಸರಿನಲ್ಲಿ ಸರಿಯಾಗಿ ಬೆರೆಸಿ, ಸೈಂಧವ ಲವಣವನ್ನು ಸೇರಿಸಿ ಕುಡಿಯುವುದರಿಂದ ಅತಿಸಾರವು ಉಪಶಮವಾಗುವುದು.

ಕಾಮಾಲೆಯು ಮನುಷ್ಯನಲ್ಲಿ ವಿಕಾರವನ್ನುಂಟು ಮಾಡುವ ಇನ್ನೊಂದು ಗಂಭೀರ ರೋಗವಾಗಿದ್ದು, ಮೈ ಉರಿ, ವಾಂತಿ, ಕಣ್ಣುಗಳು ಹಸಿರು ಇಲ್ಲವೇ ಹಳದಿಯಾಗುವುದು ಮೂತ್ರವು ಅತೀ ಹಳದಿ ಇಲ್ಲವೇ ಕೆಂಪಾಗಿ ಹೋಗುವುದು, ನಾಲಿಗೆ ರುಚಿಯನ್ನು ಕಳೆದುಕೊಳ್ಳುವುದು, ದೇಹವು ಬಲಹೀನಗೊಳ್ಳುವುದು ಇದರ ಲಕ್ಷಣಗಳಾಗಿವೆ.

ತುಪ್ಪ ಹಾಗೂ ಶುಂಠಿಗಳನ್ನು ಸೇರಿಸಿ ಕಾಯಿಸಿದ ಹಾಲಿನಲ್ಲಿ ಸೇವಿಸುವುದು. ಇಲ್ಲವೇ ನೀಲಿಯ ರಸದಲ್ಲಿ, ತ್ರಿಫಲೆಗಳನ್ನು ಸೇರಿಸಿ ಕಾಯಿಸಿದ ಹಾಲಿನಲ್ಲಿ ಬೆರೆಸಿ ಸೇವಿಸುವುದರಿಂದ ಕಾಮಾಲೆಯು ನಿಯಂತ್ರಣವಾಗುತ್ತದೆ. ಕಾಮಾಲೆಯು ಅತ್ಯಂತ ನಿಧಾನವಾಗಿ ಬೆಳೆಯುವ ರೋಗವಾಗಿದ್ದು ಅದು ಮಾರಣಾಂತಿಕವಾಗಿರುವುದರಿಂದ ಅದನ್ನು ಅಲಕ್ಷಿಸಬಾರದು ಎಂದು ಹೇಳುತ್ತಾ ಇಂಗುಳ ಹಣ್ಣಿನ ತಿರುಳನ್ನು ಬೆಲ್ಲದೊಂದಿಗೆ ಸೇರಿಸಿ ತಿನ್ನುವುದು, ಇಲ್ಲವೇ ಕುಪ್ಪೆ ಗಿಡದ ಬೇರಿನ ರಸವನ್ನಾಗಲಿ ಇಲ್ಲವೇ ಎಲೆಗಳನ್ನು ಕುಟ್ಟಿ ರಸ ಮಾಡಿ ಸೇವಿಸುವುದರಿಂದಾಗಲಿ, ಪರಂಗಿ ಎಲೆಯ ರಸವನ್ನು ಕುಡಿಸುವುದರಿಂದಾಗಲಿ ಕಾಮಾಲೆ ನಿವಾರಣೆಯಾಗುವುದು ಎಂದಿದ್ದಾನೆ ಸೋಮನಾಥ. ಅನಿಯಂತ್ರಿತ ಬಿಕ್ಕು ಹತ್ತಿದ್ದರೆ ದಾಕ್ಷಿ, ತುಪ್ಪ, ಅಣಿಲೆ, ಹಿಪ್ಪಲಿ, ಸಕ್ಕರೆಗಳನ್ನು ಸೇರಿಸಿ ಸೇವಿಸುವುದರಿಂದ ಬಿಕ್ಕಳಿಕೆಯು ನಿಲ್ಲುತ್ತದೆ. ಮೂತ್ರ ವಿಸರ್ಜನೆಯ ತೊಂದರೆಯುಂಟಾಗಿದ್ದರೆ ತ್ರಿಫಲೆಯ ಕಷಾಯ, ನೆಗ್ಗಿಲ ಮುಳ್ಳು, ಗರಿಕೆ, ಜೇಷ್ಠಮಧುಗಳೊಂದಿಗೆ ಶಿಲಾಜಿತುವನ್ನು ಸೇರಿಸಿ ಕುಡಿಯುವುದು ಇದರಿಂದ ಮೂತ್ರದ ಹರಳುಗಳೂ ನಿವಾರಣೆಯಾಗುತ್ತವೆ. ಅಲ್ಲದೇ ಮಲ್ಲಿಗೆ ಅಥವಾ ಸೂರ್ಯಶಿಖರಿಯ ಬೇರನ್ನು ಅರೆದು ತಣ್ಣನೆಯ ಹಾಲಿನಲ್ಲಿ ಸೇರಿಸುವುದರಿಂದಲೂ ಈ ತೊಂದರೆಯನ್ನು ತಪ್ಪಿಸಬಹುದು ಎಂದು ಹೇಳಲಾಗಿದೆ.

ನೆಲಗುಳ್ಳ, ಅಡಸಾಲ, ಹಿಪ್ಪಲಿಗಳನ್ನು ಅರೆದು ತುಪ್ಪದೊಂದಿಗೆ ಸೇವಿಸಿದರೆ ದೀರ್ಘಕಾಲದ ಕೆಮ್ಮು ನಿವಾರಣೆಯಾಗುವುದು. ಸೈಂಧವ, ಚಂಗಲ ಕೋಷ್ಠ, ಬಜೆ. ಯವಕ್ಷಾರ, ಹಿಂಗು ಇವುಗಳನ್ನ ಸೇರಿಸಿ ಚೂರ್ಣಮಾಡಿ ಬಿಸಿನೀರಿನೊಡನೆ ಕುಡಿಯುವುದರಿಂದಲೂ, ಇಲ್ಲವೇ ಹಿಂಗು, ಶುಂಠಿ, ಸೌವರ್ಚಲವಣ, ಅಜವಾನಗಳು ಅರೆದು ಬಿಸಿನೀರಿನಲ್ಲಿ ಕುಡಿಯುವುದರಿಂದಲೂ ಕೆಮ್ಮು ನಿವಾರಣೆಯಾಗುವುದು ಎಂದು ಹೇಳಿದ್ದಾನೆ. ಆಯುರ್ವೇದದ ಪ್ರಕಾರ ಮನುಷ್ಯನ ದೇಹಕ್ಕೆ ವಾತ ಪಿತ್ತ ಕಫ ಸಹಜವಾದವುಗಳು. ಮತ್ತು ದೈನಂದಿನ ಜೀವನದಲ್ಲಿ ಊಟ ನಿದ್ರೆ ವಿಶ್ರಾಂತಿ ಇವುಗಳಲ್ಲಿ ಏರುಪೇರಾದಾಗ ಆಗಾಗ್ಗೆ ಬರುವ ಸಹಜವಾದ ರೋಗಗಳು. ಮನುಷ್ಯರಿಗೆ ಬರುವ ವಾತರೋಗಗಳಿಗೆ ಅಶ್ವಗಂಧ ಮತ್ತು ಶುಂಠಿಗಳನ್ನು ಹಾಲಿನಲ್ಲಿ ಸೇರಿಸಿ ಕುಡಿಯುವುದು. ಅಥವಾ ಅರಿಸಿನವನ್ನು ಎಣ್ಣೆಯಲ್ಲಿ ಕುದಿಸಿ ಮೈಗೆ ಲೇಪಿಸುವುದು. ಇಲ್ಲವೇ ಅರಿಸಿನ, ಕುಂಕುಮಗಳನ್ನು ಕೊಬ್ಬರಿ ಎಣ್ಣೆಯಲ್ಲಿ ಕಾಯಿಸಿ ಮೈಗೆ ಲೇಪಿಸಿಕೊಳ್ಳುವುದು. ಹೀಗೆ ಮಾಡುವುದರಿಂದ ಎಂಬತ್ತು ಪ್ರಕಾರದ ವಾತರೋಗಗಳು ನಿರ್ಮೂಲವಾಗುವವು ಎಂದಿದ್ದಾನೆ.

ದೇಹದ ಮೇಲೆ ಕಂಡುಬರುವ ವಿಸರ್ಪ ಚರ್ಮರೋಗಗಳಿಗೆ (ತುರಿಕೆ, ಮೈಯಲ್ಲಿ ಹುಳು ಓಡಾದಿದಂತಾಗುವುದು). ನರವುಲಿ (ನರೋಲಿ, ನರಲಿ)ಗಳಿಗೆ ಬೇವಿನ ಎಲೆಯನ್ನು ಮಜ್ಜಿಗೆಯಲ್ಲಿ ಅರೆದು ಲೇಪಿಸುವುದು. ಅಥವಾ ಎಕ್ಕದ ಬೇರು. ಲಾಮಂಚ, ಶ್ರೀಗಂಧಗಳನ್ನು ಅಕ್ಕಿಯನ್ನು ತೊಳೆದ ನೀರಿನಲ್ಲಿ ಅರೆದು ಕುಡಿಯುವುದು. ಎಳನೀರಿನಲ್ಲಿ ಸಕ್ಕರೆ, ಲಾಮಂಚ, ದ್ರಾಕ್ಷಿ. ಜಾಜಿ ಹೂವು, ಬೇವಿನ ಚಿಗುರುಗಳನ್ನು ಅರೆದು ಕುಡಿಯುವುದು. ಕೆಸರಿ ನೀರಿನಲ್ಲಿ ತೊಗರಿಕಾಳುಗಳನ್ನು ಅರೆದು ನರೋಲಿ ಇರುವ ಜಾಗಕ್ಕೆ ಲೇಪಿಸಿದರೆ ಅದು ಉದುರಿ ಬೀಳುತ್ತದೆ.

ಹಸಿಶುಂಠಿ, ತ್ರಿಫಲೆ, ಆಡುಸೋಗೆ, ಬೇವಿನೆಲೆ, ರಕ್ತಚಂದನ, ಗುಳ್ಳದ ಬೇರುಗಳನ್ನು ಅರೆದು ಕಷಾಯ ಮಾಡಿ ಕುಡಿಯುವುದರಿಂದ ಮೈಬಾವು ಇಳಿಯುವುದು. ಅರಿಸಿನ, ಚಿತ್ರಮೂಲದ ಗಡ್ಡೆ, ಉತ್ತರಣೆ, ಸೈಂಧವ ಲವಣಗಳನ್ನು ಅರೆದು ಬೆಣ್ಣೆಯಲ್ಲಿ ಸೇರಸಿ ಲೇಪಿಸುವುದರಿಂದ ಗಂಡಮಾಲೆಗಳು ಶಮನವಾಗುವವು. ಮಾದಲಹಣ್ಣಿನ ಹುಳಿ, ಓಂ ಕಾಳು (ಅಜವಾನ), ಹಿಂಗು, ಸೈಂಧವ ಲವಣ, ಚಂಗಲ ಕೋಷ್ಠಗಳೊಂದಿಗೆ ಸಕ್ಕರೆಯನ್ನು ಸೇರಿ ಸೇವಿಸುದರಿಂದ ಅಜೀರ್ಣದ ತೊಂದರೆಗಳು ಶಮನವಾಗುವವು. ಕುಂಕುಮಕೇಸು, ಮೆಣಸುಗಳನ್ನು ಎಳ್ಳೆಣ್ಣೆಯಲ್ಲಿ ಸೇರಿಸಿ ಹಚ್ಚುವುದು. ಇಲ್ಲದೇ ನೆಲ್ಲಿಕಾಯಿ, ಮಾವಿನ ಗೊರಟೆಯ ತಿರುಳುಗಳನ್ನು ಅರೆದು ತಲೆಗೆ ಹಚ್ಚುವುದರಿಂದ ಕೂದಲು ಉದುರುವಿಕೆ ಹಾಗೂ ಬೊಕ್ಕು ತಲೆಯಲ್ಲಿಯೂ ಸಹ ಉದ್ದ ಕೂದಲು ಬೆಳೆಯುವುದು. ವೀಳ್ಯದೆಲೆಯಲ್ಲಿ ಪಾದರಸವನ್ನು ಸೇರಿಸಿ, ಇಲ್ಲವೇ ಎಣ್ಣೆಯಲ್ಲಿ ಪಚ್ಚ ಕರ್ಪೂರವನ್ನು ಸೇರಿಸಿ ಅರೆದು ತಲೆಗೆ ಹಚ್ಚುವುದರಿಂದ ತಲೆಯಲ್ಲಿನ ಹೇನು ಮತ್ತು ಸೀರುಗಳು ಸಾಯುವವು, ಅಮೃತ ತೈಲವನ್ನು ನಿಯಮಿತವಾಗಿ ಹಚ್ಚುವುದರಿಂದ ಬಕ್ಕ ತಲೆಯ ಸಮಸ್ಯೆಯು ನಿವಾರಣೆಯಾಗುವುದು, ಶಂಖಪುಷ್ಪವನ್ನು ಸುಟ್ಟು ಅವರ ಬೂದಿಗೆ ಸೀಸದಪುಡಿ, ಎಣ್ಣೆಯನ್ನು ಸೇರಿಸಿ ತಲೆಗೆ ಹಚ್ಚುವುದರಿಂದ ಕೂದಲು ಕಪ್ಪಾಗುವವು. ಔಡಲ ಎಣ್ಣೆಯನ್ನು ಕಾಯಿಸಿ ತಲೆಗೆ ಹಚ್ಚುವುದು. ಇಲ್ಲವೇ ಅಕ್ಕಿಯ ತೌಡನ್ನು ಅಂಬಲಿಯಲ್ಲಿ ಸೇರಿ ಹಚ್ಚುವುದರಿಂದ ತಲೆಯ ಹೊಟ್ಟು ನಿವಾರಣೆಯಾಗಿ ಕೂದಲು ಸಮೃದ್ಧವಾಗಿ ಬೆಳೆಯುವುದು.

"ಕಕ್ಕೆ ಬೇರು, ವೀಳ್ಯದೆಲೆ, ಕೇಸರಿ, ಅಳಲೆಕಾಯಿಗಳನ್ನು ಅಕ್ಕಿಗಂಜಿಯಲ್ಲಿ ಸೇರಿಸಿ ಮೂರು ದಿನ ಮೈಗೆ ಹಚ್ಚುವುದರಿಂದ ತುರಿಕೆ, ಕಜ್ಜಿ, ತದ್ದುಗಳ, ಚಿಬ್ಬುಗಳು ನಿವಾರಣೆಯಾಗುವವು. ಸುಣ್ಣ ಬಲ್ಲ ಜೀರಿಗೆ ಇವುಗಳನ್ನು ತರಿಸಿ ಸಣ್ಣಗೆ ಅರೆದು ಲೇಪವನ್ನಾಗಿ ಮಾಡಿ ಲೇಪಿಸಿದರೆ, ಇಲ್ಲವೇ ಗುಲಗಂಜಿ ರಸ, ಎಣ್ಣೆ ಅಥವಾ ಕಳ್ಳಿಯ ಬೇರು ಇವುಗಳಲ್ಲಿ ಯಾವುದಾದರೊಂದನ್ನು ಸುಟ್ಟು ಅದರ ಬೂದಿಯನ್ನು ಹಲ್ಲಿನಲ್ಲಿ ಹಾಕುವುದರಿಂದ ಕ್ರಿಮಿಗಳು ನಾಶವಾಗಿ ಹುಳುಕು ಹಲ್ಲಿನ ಸಮಸ್ಯೆ ನಿವಾರಣೆಯಾಗುವುದು. ಬಾಗೆಯ ಬೀಜಗಳನ್ನು ಗೋಮೂತ್ರದಲ್ಲಿ ಸೇರಿಸಿ ಅರೆದು ಮುಖಕ್ಕೆ ಲೇಪಿಸುವುದು. ಇಲ್ಲವೇ ಶ್ರೀಗಂಧ ಮತ್ತು ಮೆಕ್ಕೆಕಾಯಿಗಳನ್ನು ಅರೆದು ಮುಖಕ್ಕೆ ಲೇಪಿಸುವುದರಿಂದ ಮುಖದಲ್ಲಿನ ಮೇಲಿನ ಗಟ್ಟುಗಳು, ಮೊಡವೆಗಳು ಮಾಯವಾಗುತ್ತವೆ ಎಂದಿದ್ದಾನೆ ಸೋಮನಾಥ."[11]

ಹೀಗೆ ಜಗದ್ದಳ ಸೋಮನಾಥನು ತನ್ನ 'ಕರ್ಣಾಟಕ ಕಲ್ಯಾಣಕಾರಕ' ಗ್ರಂಥದಲ್ಲಿ ಹಲವಾರು ರೋಗಗಳು ಮತ್ತು ಅವುಗಳಿಗೆ ಔಷಧೀಕ್ರಮಗಳನ್ನು ಬೋಧಿಸಿದ್ದಾನೆ. ಮನುಷ್ಯನು ಅನ್ನ, ಆಹಾರ, ನೀರು ಸೇವನೆಯಲ್ಲಿ ಎಚ್ಚರಿಕೆ ವಹಿಸುವುದರಿಂದ ಹಲವು ಬಗೆಯ ರೋಗಗಳನ್ನು ತಡೆಗಟ್ಟಲು ಸಾಧ್ಯವಿದೆ ಎಂಬ ಸತ್ಯವನ್ನು ಮನಗಾಣಿಸಿದ್ದಾನೆ. ಕವಿಯು ಉಲ್ಲೇಖಿಸಿದ ಹಲವಾರು ಆಯುರ್ವೇದ ಸಸ್ಯಗಳು ಸುಲಭವಾಗಿ ಕೈಗೆಟುಕುವಂತಿರುವವುಗಳು, ಅವುಗಳನ್ನು ಚಿಕಿತ್ಸೆಗಾಗಿ ಬಳಸಿಕೊಳ್ಳಲು ಸುಲಭ ಉಪಾಯಗಳನ್ನು ಗ್ರಂಥದಲ್ಲಿ ಪ್ರಸ್ತುಪಡಿಸಿದ್ದಾನೆ. ಅಲ್ಲದೆ ಪ್ರಸ್ತುತ ಅನೇಕ ಆಯುರ್ವೇದ ವೈದ್ಯರು ಜಗದ್ದಳ ಸೋಮನಾಥ ಹೇಳಿದ ಔಷಧಿಗಳನ್ನು ಮತ್ತು ಚಿಕಿತ್ಸಾ ವಿಧಾನಗಳನ್ನು ಪ್ರಚಲಿತದಲ್ಲಿಯೂ ಅನುಸರಿಸುತ್ತಿರುವುದು ಕಂಡುಬರುತ್ತದೆ. ಹೀಗಾಗಿ ಜಗ್ದಳ ಸೋಮನಾಥ ಓರ್ವ ಪರಿಣಿತ ಆಯುರ್ವೇದ ವೈದ್ಯ ಸಾಹಿತಿ ಎಂದರೆ ತಪ್ಪಾಗಲಿಕ್ಕಿಲ್ಲ. ಈ ನಿಟ್ಟಿನಲ್ಲಿ ಜಗದ್ದಳ ಸೋಮನಾಥನ ಕರ್ನಾಟಕ 'ಕಲ್ಯಾಣಕಾರಕ' ಕೃತಿಯು ಅಂದು ಇಂದು ಮುಂದು ಎಂದೆಂದೂ ಒಂದು ಮೌಲಿಕ ವೈದ್ಯ ಕೃತಿಯಾಗಿ ನಿಲ್ಲುತ್ತದೆ. ಅಂದಿನ ಕಾಲದಲ್ಲಿ ರಾಜಶ್ರಯದಲ್ಲಿ ಪಂಡಿತ ಮಂಡಳಿಯ ಪರಿಸರದಲ್ಲಿ ಸಾವ ಕೆಡುವವರ ಮೇಲೆ ಕಾವ್ಯ ರಚನೆ ಮಾಡುವ ಕವಿಗಳಿಗಿಂತಲೂ ತಾನು ಭಿನ್ನವಾಗಿ ಜನರ ಒಳಿತಿಗಾಗಿ ಕಾವ್ಯ ರಚನೆ ಮಾಡುತ್ತಿರುವುದಾಗಿ ಕವಿ ಹೇಳಿಕೊಂಡಿರುವುದರಿಂದ ಸೋಮನಾಥನ ಈ ಕೃತಿಯ ರಚನೆಯಲ್ಲಿ ಜನಹಿತದ ಕಳಕಳಿ ಇದೆ. ಹಾಗೂ ಅವನ ಶ್ರಮದ

ಸಾರ್ಥಕತೆ ಇದೆ. ಈ ದೃಷ್ಟಿಯಿಂದ ಜಗ್ಗಳ ಸೋಮನಾಥನ ಕರ್ನಾಟಕ ಕಲ್ಯಾಣ ಕಾರಕ ಕೃತಿ ಅಂದಿನ ಸಂದರ್ಭದಲ್ಲಿ ಎಲ್ಲರಿಗೂ ಉಪಯೋಗವಾಗಬಲ್ಲ ಜನಪ್ರಿಯ ಕೃತಿ ಎಂದರೆ ತಪ್ಪಾಗಲಿಕ್ಕಿಲ್ಲ.

**ಕೊನೆಯ ಟಿಪ್ಪಣಿ:**

1. ಆರ್. ನರಸಿಂಹಚಾರ್ಯ, ಕರ್ನಾಟಕ ಕವಿಚರಿತೆ, ಸಂಪುಟ–1, ಪುಟ–305.
2. ಧನ್ಯಕುಮಾರ ಇಜಾರಿ, ಜೈನ ಲೌಕಿಕ ಸಾಹಿತ್ಯ ಸಂಪದ, ಪುಟ–43.
3. ಆರ್.ನರಸಿಂಹಚಾರ್ಯ, ಕರ್ನಾಟಕ ಕವಿಚರಿತೆ, ಸಂಪುಟ–1, ಪುಟ–205.
4. ಕನ್ನಡ ವಿಶ್ವಕೋಶ, ಸಂಪುಟ–7, ಪುಟ–625.
5. ಧನ್ಯಕುಮಾರ ಇಜಾರಿ, ಜೈನ ವೈದಕೀಯ ಪರಂಪರೆ, ಪುಟ–48
6. ಎ.ರಂಗಸ್ವಾಮಿ, ಪ್ರಾಚೀನ ಲೌಕಿಕ ಶಾಸ್ತ್ರಗ್ರಂಥಗಳು, ಪುಟ–30
7. ಆರ್. ನರಸಿಂಹಚಾರ್ಯ, ಕರ್ನಾಟಕ ಕವಿ ಚರಿತೆ, ಪ್ರಥಮ ಸಂಪುಟ, ಪುಟ–30
8. ಧನ್ಯಕುಮಾರ ಇಜಾರಿ ; ಜೈನ ಲೌಕಿಕ ಸಾಹಿತ್ಯ ಸಂಪದ, ಪುಟ–47
9. ಏ.ರಂಗಸ್ವಾಮಿ, ಪ್ರಾಚೀನ ಲೌಕಿಕ ಶಾಸ್ತ್ರ ಗ್ರಂಥಗಳು, ಪುಟ–32
10. ಅದೇ ಪುಟ.32 33
11. ಧನ್ಯಕುಮಾರ ಇಜಾರಿ, ಜೈನ ವೈದಕೀಯ ಪರಂಪರೆ, ಪುಟ–73